## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಿ.ವಿ.ರಾಮನ್‌ನಗರ ಉಪ ವಿಭಾಗ, ವಾರ್ಡ್ ಸಂಖ್ಯೆ:119, ಸರ್ವಜ್ಞನಗರ
## ವಾರ್ಡ್ ಸಮಿತಿ ಸಭೆ, ದಿನಾಂಕ:17-10-2022 ರ ಸಭಾ ನಡವಳಿಗಳು

ದಿನಾಂಕ: 17-10-2022 ರಂದು ಮಧ್ಯಾಹ್ನ:3.00 ಗಂಟೆಗೆ ವಾರ್ಡ್-119 ಹೊಸ ಬೈಯ್ಯಪ್ಪನಹಳ್ಳಿ (ಹಳೇ ವಾರ್ಡ್-79) ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಎಂ.ಎಂ.ರಸ್ತೆಯಲ್ಲಿರುವ ಪಾಲಿಕೆಯ ಕಟ್ಟಡದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

1. ಶ್ರೀ.ಸಂದೀಪ್ ಓರಿ
2. ಶ್ರೀ.ಮುನಿರಾಜ್
3. ಶ್ರೀ.ಸುರೇಶ್
4. ಶ್ರೀ.ಸಂಜೋಗ್ ಆರ್.ಡಬ್ಲ್ಯೂ.ಎ

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಮಟ್ಟದ ಅಧಿಕಾರಿ/ನೌಕರರು**

1. ಶ್ರೀ.ಡಾ||ನಯನ ತಾರಾ ಪಾಟೀಲ್ ನೋಡೆಲ್ ಅಧಿಕಾರಿಗಳು, ವಾರ್ಡ್ ಸಂಖ್ಯೆ:119(ಹಳೇ ವಾರ್ಡ್-79) ಹೊಸ ಬೈಯ್ಯಪ್ಪನಹಳ್ಳಿ
2. ಶ್ರೀ.ನರಸಿಂಹಯ್ಯ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ವಾರ್ಡ್ ಸಂಖ್ಯೆ:119(ಹಳೇ ವಾರ್ಡ್-79) ಹೊಸ ಬೈಯ್ಯಪ್ಪನಹಳ್ಳಿ
3. ಶ್ರೀಮತಿ.ದಿವ್ಯ ಕಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ.ಮಲ್ಲಪ್ಪ, ಬಿಡಬ್ಲ್ಯೂಎಸ್‌ಎಸ್‌ಬಿ ಅಭಿಯಂತರರು

ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವ ಎಲ್ಲಾ ಇಲಾಖೆ ಹಾಗೂ ಸಾರ್ವಜನಿಕರಿಗೆ ಸ್ವಾಗತ ಕೋರಿದರು. ಹಾಗೂ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿರುವ ವಿಷಯಗಳ ಬಗ್ಗೆ ಸಭೆಯಲ್ಲಿ ತಿಳಿಸಲು ಕೋರಿ ಸಭೆಯನ್ನು ಆರಂಭಿಸಲಾಯಿತು.

**ಸಭೆಯಲ್ಲಿ ಚರ್ಚಿಸಿದ ವಿಷಯಗಳು:-**

| ಕ್ರ.ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವ ಅಧಿಕಾರಿ |
|---|---|---|
| | **ಘನತ್ಯಾಜ್ಯ ನಿರ್ವಹಣೆ (SWM)** | |
| 1 | ಶ್ರೀ.ಸಂಜೋಗ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಪಿ.ಎಸ್.ಕೆ ನಾಯ್ಡು ರಸ್ತೆ, ರಾಮಕೃಷ್ಣಪ್ಪ ರಸ್ತೆಯ ಜಂಕ್ಷನ್‌ನಲ್ಲಿ ಕಸ ವಿಲೇವಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು ಸೂಚಿಸಿದರು.<br>ಕಿರಿಯ ಆರೋಗ್ಯ ಪರಿವೀಕ್ಷಕರು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. | **Junior Health Inspector** |
| | **ಕಾಮಗಾರಿ ಇಲಾಖೆ (Engineering)** | |
| 1 | ಶ್ರೀ.ಮುನಿರಾಜ್ ಸದಸ್ಯರು ರವರು ಮಾತನಾಡಿ ಈ ಕೆಳಕಂಡ ವಿಷಯಗಳ ಬಗ್ಗೆ ಕ್ರಮ ವಹಿಸಲು ಕೋರಿದರು.<br>➢ ವಾರ್ಡ್ ವ್ಯಾಪ್ತಿಯಲ್ಲಿ ಸಿ.ಸಿ.ಕ್ಯಾಮೆರಾ ಅಳವಡಿಸಲು ಕೋರಿದರು.<br>➢ ಹೊಸ ಬೈಯ್ಯಪ್ಪನಹಳ್ಳಿಯಲ್ಲಿ ಹೊಸದಾಗಿ ಗ್ರಂಥಾಲಯ ಕಟ್ಟಡ ನಿರ್ಮಿಸಲು ಕೋರಿದರು. ಇದಕ್ಕೆ ವಾರ್ಡ್ ಅಭಿಯಂತರರು ಮಾತನಾಡಿ ಗ್ರಂಥಾಲಯ ಕಟ್ಟಡಕ್ಕೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.<br>➢ ಹಳೇ ಬೈಯ್ಯಪ್ಪನಹಳ್ಳಿ ಕಡೆಗೆ ಹಾದು ಹೋಗುವ ಫ್ಲೈ ಓವರ್ ಕೆಳಕಡೆ ಇರುವ ರಸ್ತೆಗೆ ಡಾಂಬರೀಕರಣ ಮಾಡಲು ಕೋರಿರುತ್ತಾರೆ.<br>ಇದಕ್ಕೆ ವಾರ್ಡ್ ಅಭಿಯಂತರರು ಮಾತನಾಡಿ ಸದರಿ ರಸ್ತೆಯು ರಸ್ತೆ ಮೂಲಭೂತ ಸೌಕರ್ಯ ವಿಭಾಗ ರವರಿಗೆ ಒಳಪಡುವುದರಿಂದ | **Assistant Engineer-BBMP** |

| | | |
|---|---|---|
| | ಸದರಿಯವರಿಗೆ ಪತ್ರ ಬರೆಯಲಾಗುವುದು ಎಂದು ತಿಳಿಸಿರುತ್ತಾರೆ.<br>➤ ಹೊಸ ಬೈಯ್ಯಪ್ಪನಹಳ್ಳಿಯಲ್ಲಿರುವ ಬೃಹತ್ ನೀರುಗಾಲುವೆಯಲ್ಲಿ ಹೂಳು ತೆಗೆದು ಸ್ವಚ್ಚಗೊಳಿಸಲು ಕೋರಿರುತ್ತಾರೆ. ಇದಕ್ಕೆ ವಾರ್ಡ್ ಅಭಿಯಂತರರು ಮಾತನಾಡಿ ಮೂಲಭೂತ ಸೌಕರ್ಯ ವಿಭಾಗ ರವರಿಗೆ ಒಳಪಡುವುದರಿಂದ ಸದರಿಯವರಿಗೆ ಪತ್ರ ಬರೆಯಲಾಗುವುದು ಎಂದು ತಿಳಿಸಿರುತ್ತಾರೆ. | |
| | **ಪಶುಸಂಗೋಪನಾ ಇಲಾಖೆ (Animal & Husbandary)** | |
| 1 | ಕಾಕ್ಸ್‌ಟೌನ್‌ನ ಸುತ್ತ-ಮುತ್ತ ಪ್ರದೇಶಗಳಲ್ಲಿ ಹಸುಗಳ ರಸ್ತೆಯಲ್ಲಿ ಇರುವುದರಿಂದ ಸಂಚಾರ ದಟ್ಟಣೆ ಹಾಗೂ ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿರುವುದರ ಬಗ್ಗೆ ಶ್ರೀ.ಸಂದೀಪ್ ಓರಿ ರವರು ದೂರನ್ನು ನೀಡಿರುತ್ತಾರೆ.<br>ಸದರಿ ಇಲಾಖೆಯವರಿಗೆ ತಿಳಸಲಾಗುವುದು ಎಂದು ವಾರ್ಡ್ ಅಭಿಯಂತರರು ತಿಳಿಸಿರುತ್ತಾರೆ. | ಪಶುಸಂಗೋಪನಾ ಇಲಾಖೆ /ಹಿರಿಯ ಆರೋಗ್ಯ ಪರಿವೀಕ್ಷಕರು |

ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸಿ, ಕಾರ್ಯದರ್ಶಿ ವಾರ್ಡ್ ಸಮಿತಿ ಇವರಿಗೆ ಅನುಪಾಲನಾ ವರದಿಯನ್ನು ನೀಡುವುದು.

ಕಾರ್ಯದರ್ಶಿಗಳು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**ಕಾರ್ಯದರ್ಶಿಗಳು**

ಶ್ರೀ.ನರಸಿಂಹಯ್ಯ
ಸಹಾಯಕ ಅಭಿಯಂತರರು(ಪ್ರಭಾರ)
ವಾರ್ಡ್ ಸಂಖ್ಯೆ:119-ಹೊಸ ಬೈಯ್ಯಪ್ಪನಹಳ್ಳಿ

**ಅಧ್ಯಕ್ಷರು**

ಡಾ||ನಯನ ತಾರಾ ಪಾಟೀಲ್,
ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ:119-ಹೊಸ ಬೈಯ್ಯಪ್ಪನಹಳ್ಳಿ